MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

| Vol.46 | No:50 | ENGLISH DAILY | Subscription Yearly - Rs. - | MONDAY | 20-9-2021 |
|---|---|---|---|---|---|

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

# ಗೋಡಂಬಿಗೆ ಹಬ್ಬದ ಬೇಡಿಕೆ ನಿರೀಕ್ಷೆ

ಪ್ರತಿ ವರ್ಷದ ನವರಾತ್ರಿ, ದೀಪಾವಳಿ ಹಬ್ಬಗಳಿಗೆ ದೇಶೀ ಮಾರುಕಟ್ಟೆಯಲ್ಲಿ ಗೋಡಂಬಿಗೆ ಬೇಡಿಕೆ ಹೆಚ್ಚಳವಾಗುವುದು ವಾಡಿಕೆ. ಈ ವರ್ಷವೂ ಸೆಪ್ಟೆಂಬರ್, ಅಕ್ಟೋಬರ್ ತಿಂಗಳಲ್ಲಿ ಗೋಡಂಬಿಗೆ ಉತ್ತಮ ಬೇಡಿಕೆ ನಿರೀಕ್ಷೆಯಿದೆ. ಉಳಿದ ಒಣ ಹಣ್ಣುಗಳ ವರ್ಗಕ್ಕೆ ಹೋಲಿಸಿದರೆ, ಗೋಡಂಬಿಯ ದರ ಕಡಿಮೆಯಿದ್ದು ಸ್ಪರ್ಧಾತ್ಮಕವಾಗಿದೆ. ಗೋಡಂಬಿಯ ಪರ್ಯಾಯವೆನಿಸಿದ ಬಾದಾಮಿ ಬೆಲೆ ಈ ವರ್ಷ ಹೆಚ್ಚಳವಿದ್ದು, ಕ್ಯಾಲಿಫೋರ್ನಿಯಾ, ಅಮೆರಿಕ ಕಡೆಗಳಲ್ಲಿ ಪ್ರತಿಕೂಲ ಹವಾಮಾನದಿಂದ ಬಾದಾಮಿ ಬೆಳೆ ಇಳಿಕೆಯಾಗಲಿದೆಯೆನ್ನಲಾಗಿದ್ದು, ಆಮದು ಮಾಡಲು ಹಡಗುಗಳಲ್ಲಿ ಕಂಟೈನರ್ ಗಳು ಸೀಮಿತ ಲಭ್ಯತೆ, ಆಮದು ವಿಳಂಬ ಮುಂತಾದ ಹಲವು ಸಮಸ್ಯೆಗಳಿವೆ. ಆಮದಾಗುತ್ತಿರುವ ಹಣ್ಣುಗಳು ಸಾಕಷ್ಟು ಲಭ್ಯತೆಯಾಗದೆ ದರ ಹೆಚ್ಚಳವಾಗುತ್ತಿದೆ. ಗೋಡಂಬಿ ಯಥೇಷ್ಟ ಲಭ್ಯತೆಯಿರುವುದರಿಂದ ದೇಶೀ ಮಾರುಕಟ್ಟೆಯಲ್ಲಿ ಸುಲಭವಾಗಿ ಲಭ್ಯತೆಯಿದ್ದು ಬೇಡಿಕೆ ಹೆಚ್ಚಳವಾಗುವ ನಿರೀಕ್ಷೆಯಿದೆ. ಬೇಡಿಕೆ ಹೆಚ್ಚಳವಾದಲ್ಲಿ ಈಗಿರುವ ದರ ಹೆಚ್ಚಳವಾಗುವ ಸಂಭವವಿದೆ.